ಅವಕಾಶವಿಲ್ಲ. ಪಂಚಾಯತಿಗಳವರಿಗೂ ಸಹ ನಿವೇಶನವನ್ನು ಕೊಡುವುದಕ್ಕೆ ಸರಕಾರದವರು ಬಜೆಟ್ಟಿನಲ್ಲಿ ಅವಕಾಶ ಮಾಡಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲೂ ಕೂಡ ಇಂತಹ ಅವಕಾಶ ಇಲ್ಲದೇ ಇರುವುದರಿಂದಾಗಿ ಈಗಲಾದರೂ ಅಂತಹ ಅವಕಾಶವನ್ನು ಕಲ್ಪಿಸಿ ಕೊಡುತ್ತೀರಾ ? ಈ ಬಗ್ಗೆ ನನಗೆ ಸ್ಪಷ್ಟವಾದಂತಹ ಭರವಸೆ ಕೊಡಬೇಕು.

ಶ್ರೀ ಟಿ.ಎನ್. ನರಸಿಂಹಮೂರ್ತಿ.—ಇದು ತಮಗೆ ಮತ್ತು ಎಲ್ಲಾ ಸದಸ್ಯರಿಗೆ ಗೊತ್ತಿರತಕ್ಕಂತಹ ವಿಚಾರವಾಗಿದೆ. ಗ್ರಾಮಾಂತರ ಪ್ರದೇಶದಲ್ಲಿನ ಹರಿಜನ ಗಿರಿಜನರಿಗೆ ಅಂದರೆ ಎಸ್‌ಸಿಎಸ್‌ಟಿ ಯವರಿಗೆ ಉಚಿತ ನಿವೇಶನವನ್ನು ಕೊಡತಕ್ಕಂತಹ ಕಾರ್ಯಕ್ರಮವನ್ನು ಸಾರೋದ್ಧಾರವಾಗಿ ಮುಂದುವರಿಸಿಕೊಂಡು ಹೋಗುತ್ತಿದ್ದೇವೆ. ಇದನ್ನು ಮುಂಡಲ ಪಂಚಾಯತಿಯು ಮುಖಾಂತರ ಹಂಚಿಕೆ ಮಾಡುತ್ತಿದ್ದೇವೆಯೇ ಹೊರತು, ಅವರು ಹಣವನ್ನು ತೆಗೆದುಕೊಂಡು ನಿವೇಶನವನ್ನು ನೀಡಿದ್ದಾರೆ ಎಂಬ ಬಗ್ಗೆ ನಮಗೆ ಯಾವ ನಿದರ್ಶನ ಬಂದಿಲ್ಲ. ಗ್ರಾಮಾಂತರ ಪ್ರದೇಶದಲ್ಲಿನ ಪಾವರ್ಟಿ ಲೈನ್‌ನಿಂದ ಕೆಳಗೆ ಇರತಕ್ಕಂಥ ವರಿಗೆ ಈಗಲೂ ಕೂಡ ನಿವೇಶನವನ್ನು ಉಚಿತವಾಗಿ ಕೊಡುತ್ತಿದ್ದೇವೆ. ಅದು ಜೀವಂತವಾಗಿ ಇದೆ. ಆದರೆ ಪಟ್ಟಣ ಪ್ರದೇಶಗಳಲ್ಲಿ ಈ ಸೌಲಭ್ಯ ಇಲ್ಲವೆಂದು ಹೇಳಿದ್ದೇನೆ. ತಾವು ಕೊಟ್ಟಿರತಕ್ಕಂತಹ ಒಳ್ಳೆಯ ಸಲಹೆ ಏನು ಇದೆ, ಅದನ್ನು ಪರಿಶೀಲನೆ ಮಾಡಿ ಮಂತ್ರಿ ಮಂಡಲದ ಮುಂದೆ ತರಲು ನಾನು ಪ್ರಯತ್ನ ಮಾಡುತ್ತೇನೆ.

ಶ್ರೀ ಕರಿಯಣ್ಣ —ಶಾಸಕನಾದ ನಾನು ಜಿಲ್ಲಾ ಪರಿಷತ್ ಸದಸ್ಯನೂ ಆಗಿದ್ದೇನೆ. ಉಚಿತವಾದ ನಿವೇಶನವನ್ನು ಕೊಟ್ಟಿರುವಂತಹ ಉದಾಹರಣೆ ಇಲ್ಲ. ಏಕೆಂದರೆ ತಾಲ್ಲೂಕು ಪಂಚಾಯತಿಯಲ್ಲೂ ಕೂಡ ಇದನ್ನು ವಿಮರ್ಶೆ ಮಾಡಿದ್ದೇವೆ. ಎಲ್ಲಿಯೂ ಕೂಡ ಮಂಡಲ ಪಂಚಾಯಿತಿಗಳಿಗೆ ಸರ್ಕಾರ ಆರ್ಥಿಕವಾದ ಸಹಾಯವನ್ನು ಕೊಡದೇ ಇರುವುದರಿಂದ ಅವರು ಜಮೀನನ್ನು ಆಕ್ಟಿರ್ ಮಾಡಿ ಪುಕ್ಕಟೆ ನಿವೇಶನವನ್ನು ಹಂಚುವುದಕ್ಕೆ ಆಗುವುದಿಲ್ಲವೆಂದು ಹೇಳಂತ್ತಿದ್ದಾರೆ. ಆದ್ದರಿಂದ ಇದನ್ನು ಯಾವ ರೀತಿ ಬಗೆಹರಿಸುತ್ತಿರೆಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಟಿ.ಎನ್. ನರಸಿಂಹಮೂರ್ತಿ —ಈಗಾಗಲೇ ಏನು ಉತ್ತರವನ್ನು ಹೇಳಿದ್ದೇನೆ ಅದಕ್ಕಿಂತ ಹೆಚ್ಚು ಉತ್ತರವನ್ನು ಕೊಡುವುದಕ್ಕೆ ನನ್ನ ಕೈಲಿ ಆಗುವುದಿಲ್ಲ

ಖಾಸಗಿ ವಿದ್ಯಾ ಸಂಸ್ಥೆಗಳ ಮೇಲೆ ಸರ್ಕಾರದವರ ಹತೋಟಿ

೬೨೭. ಶ್ರೀ ಆರ್. ಬಿ ಚೌದರಿ (ಸಿಂಧಗಿ).—ಮಾನ್ಯ ಶಿಕ್ಷಣ ಯುವಜನ ವ್ಯವಹಾರಗಳು, ಕ್ರೀಡೆಗಳು, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳೆಯುತ್ತಿರುವ ಖಾಸಗಿ ಶಿಕ್ಷಣ ಸಂಸ್ಥೆಗಳ ಮೇಲೆ ಸರ್ಕಾರದ ಹತೋಟಿಯಿದೆಯೇ ?

ಆ) ಖಾಸಗಿ ಶಿಕ್ಷಣ ಸಂಸ್ಥೆಗೆ ಸರ್ಕಾರವು ಮಾಡಿದ ಶಿಕ್ಷಕರ ಅನುಮೋದನೆಯನ್ನು ರದ್ದು ಪಡಿಸಬಹುದೇ ?

ಶ್ರೀ ಕೆ.ಹೆಚ್. ರಂಗನಾಥ (ಶಿಕ್ಷಣ, ಯುವಜನ ವ್ಯವಹಾರಗಳು, ಕ್ರೀಡೆಗಳು ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು).—

ಅ) ಸರ್ಕಾರದ ಅನುಮತಿ ಪಡೆದು ನಡೆಸುವ ಖಾಸಗಿ ಶಿಕ್ಷಣ ಸಂಸ್ಥೆಗಳ ಮೇಲೆ ಮಾತ್ರ ಸರ್ಕಾರದ ಹತೋಟಿ ಇದೆ. ಅನುಮತಿ ಪಡೆಯದೆ ಪ್ರಾರಂಭಿಸಿರುವ ಶಾಲೆಗಳಿಗೆ ಮಕ್ಕಳನ್ನು ಸೇರಿಸಬಾರದೆಂದು ಸಾರ್ವಜನಿಕರಿಗೆ ಪ್ರತಿ ವರ್ಷ ಪತ್ರಿಕಾ ಪ್ರಕಟಣೆ ಮೂಲಕ ಎಚ್ಚರಿಸಲಾಗುತ್ತಿದೆ. ಹಾಗೂ ಇಂತಹ ಶಾಲೆಗಳ ವಿದ್ಯಾರ್ಥಿಗಳಿಗೆ ಸರ್ಕಾರ ನಡೆಸುವ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಅವಕಾಶ ನೀಡಲಾಗುವುದಿಲ್ಲ.

ಆ) ನಿಯಮಗಳ ಪ್ರಕಾರ ಅವಕಾಶ ಇಲ್ಲ.

ಶ್ರೀ ಆರ್.ಬಿ. ಚೌಧರಿ.—ಬಿಜಾಪುರದಲ್ಲಿ ಒಂದು ವಿ.ವಿ. ಸಂಘ ಎಂಬ ಒಂದು ಖಾಸಗಿ ಸಂಸ್ಥೆ ಇದೆ. ಅವರ ನಾವು ಆರ್ಥಿಕವಾಗಿ ಬದ್ಧರಿದ್ದೇವೆ. ನಮ್ಮ ಮೇಲೆ ಸರಕಾರದ ಹತೋಟಿ ಇಲ್ಲವೆಂಬ ರೀತಿಯಲ್ಲಿ ಹೇಳುತ್ತಿದ್ದಾರೆ ಇದು ನಿಜವೇ,

ಶ್ರೀ ಕೆ. ಹೆಚ್. ರಂಗನಾಥ್.—ಅವರು ಹೇಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ. ನನ್ನ ಗಮನಕ್ಕೂ ಕೂಡ ಇದು ಬಂದಿಲ್ಲ. ಮಾನ್ಯ ಸದಸ್ಯರು ಇದು ಯಾವ ಶಾಲೆಗೆ ಸಂಬಂಧಪಟ್ಟಿದ್ದು ಏನು ಎಂಬ ಬಗ್ಗೆ ಪತ್ರ ಬರೆದರೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಆರ್. ಬಿ. ಚೌಧರಿ.—ಬಿಜಾಪುರದ ಎ. ಇ. ಓ. ಅವರು ಖಾಸಗಿ ಶಿಕ್ಷಣ ಸಂಸ್ಥೆಯಲ್ಲಿ ಮಾಡಿದ ಅಪ್ರೂವಲ್ ಅನ್ನು ಕ್ಯಾನ್ಸಲ್ ಮಾಡಜಹುದೆಂದು ಪತ್ರ ಬರೆದಿದ್ದಾರೆ. ಇದು ನಿಜವೆ.

ಶ್ರೀ ಕೆ. ಹೆಚ್. ರಂಗನಾಥ್.—ನನ್ನ ಗಮನಕ್ಕೆ ಬಂದಿಲ್ಲ,

ರೋಜ್‌ಗಾರ್ ಯೋಜನೆ

೬೬೯. ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ಹಾಸನ ಪಟ್ಟಣದ ಮಧ್ಯದಲ್ಲಿರುವ ಚಿಪ್ಪಿನಕಟ್ಟೆಯನ್ನು ಮುಚ್ಚಿ ಈ ಪ್ರದೇಶದಲ್ಲಿ ಒಂದು ಉದ್ಯಾನವನ್ನು ನಿರ್ಮಿಸಲು ರೋಜಗಾರ್ ಯೋಜನೆಯಲ್ಲಿ ಅಂದಾಜು ತಯಾರು ಮಾಡಿರುವುದು ನಿಜವೇ;

ಆ) ಹಾಗಿದ್ದಲ್ಲಿ ಇದರ ಅಂದಾಜು ವೆಚ್ಚವೆಷ್ಟು;

ಇ) ಈ ಕೆಲಸವನ್ನು ಎಂದಿನಿಂದ ಪ್ರಾರಂಭಿಸಲಾಗುವುದು ಮತ್ತು ಎಂದು ಮುಗಿಸಲಾಗುವುದು?

ಶ್ರೀ ಟಿ.ಎನ್. ನರಸಿಂಹಮೂರ್ತಿ (ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು).—

ಅ) ಹೌದು.

ಆ) ಯೋಜನೆಗೆ ಅಂದಾಜು ವೆಚ್ಚ ರೂ. ೯,೬೫,೦೦೦-೦೦

ಇ) ೧೯೯೦-೯೧ನೇ ಸಾಲಿನಲ್ಲಿ ಕೆಲಸವನ್ನು ಪ್ರಾರಂಭಿಸಿ ಆದಷ್ಟು ಜಾಗ್ರತೆ ಮುಗಿಸಲಾಗುವುದು.

ಶ್ರೀ ಕೆ. ಹೆಚ್. ಹನುಮೇಗೌಡ.—ಮಾನ್ಯ ಅಧ್ಯಕ್ಷರೇ ಹಾಸನದ ಮಧ್ಯೆ ಇರುವ ೩ ಎಕರೆ ಚಿಪ್ಪಿನ ಕಟ್ಟೆಯಲ್ಲಿ ಗಲೀಜಿಲ್ಲಾ ಶೇಕರಣೆಯಾಗುತ್ತಿದೆ. ಅರ್ಧ ಮೈಲಿಗೆ ದುರ್ವಾಸನೆ ಹೊಡೆಯುತ್ತದೆ. ಪ್ರತಿನಿತ್ಯ ಕೋಟ್ಯಾಂತರ ಸೊಳ್ಳೆ ಉತ್ಪತ್ತಿಯಾಗುತ್ತಿದೆ. ೭೮ ರಲ್ಲಿ ಇದೇ ಸದನದಲ್ಲಿ ಇದರ ಬಗ್ಗೆ ಪ್ರಶ್ನೆ ಕೇಳಿದ್ದೆ. ಆಗ ಆದಷ್ಟು ಜಾಗ್ರತೆ ಮುಚ್ಚುತ್ತೇವೆಂದು ಹೇಳಿದ್ದರು. ಈಗ ೧೨ ವರ್ಷ ಕಳೆದಿದೆ. ನನಗೆ ಗೊತ್ತಿರುವ ಪ್ರಕಾರ ಇದಕ್ಕೆ ಅಂದಾಜು ಮಾಡಿ ರೋಜ್‌ಗಾರ್ ಯೋಜನೆಯಲ್ಲಿ ೬೭ ಲಕ್ಷ ರೂಪಾಯಿ ಹಣವನ್ನು ಡೆಪಾಸಿಟ್ ಮಾಡಿದ್ದಾರೆ. ಡೆಪಾಸಿಟ್ ಮಾಡಿ ೩-೪ ತಿಂಗಳಾಯಿತು. ಇದನ್ನು ಯಾವಾಗ ಮಾಡುತ್ತೀರಿ ಎಂದು ಕೇಳಿದ್ದಕ್ಕೆ ಇವರು ೯೦-೯೧ನೇ ಸಾಲಿನಲ್ಲಿ ಎಂದು ಹೇಳಿದ್ದಾರೆ. ೩೦ಲ್ಲಿ ಸುತ್ತ ಮುತ್ತ ಇರತಕ್ಕಂತಹವರು ಬಡವರಾಗಿದ್ದು ಗುಡಿಸಲುಗಳನ್ನು ಹಾಕಿಕೊಂಡಿದ್ದಾರೆ. ಲಕ್ಷಾಂತರ ಜನ ಬಡವರಿಗೆ ಅನುಕೂಲವಾಗುತ್ತದೆ. ಬಡವರಿಗೆ ಉದ್ಯೋಗ ಸಿಗುತ್ತದೆ ಕೊಳಚೆ ಪ್ರದೇಶ ಹೋಗಿ ಉತ್ತಮ ಉದ್ಯಾನವನವಾಗುತ್ತದೆ. ಇದನ್ನು ಮಾಡುವುದಕ್ಕೆ ಏಕೆ ಮುಂದೂಡುತ್ತಿದ್ದಾರೆಂದು ನನಗೆ ಅರ್ಥವಾಗುತ್ತಿಲ್ಲ. ಖಚಿತವಾದ ತಾರೀಖನ್ನು ಹೇಳಬೇಕು. ಹಣದ ಕೊರತೆಯಂತೂ ಇಲ್ಲ, ಆಳುಗಳು ಬೇಕಾದಷ್ಟು ಜನ ಸಿಗುತ್ತಾರೆ. ಆದ್ದರಿಂದ ಇದನ್ನು ದಯಮಾಡಿ ಮುಚ್ಚಿಸಬೇಕೆಂದು ಹೇಳುತ್ತೇನೆ. ಇದರಲ್ಲಿ ಏಕೆ ತಡವಾಗುತ್ತಿದೆ ಎಂಬ ಬಗ್ಗೆ ಕೂಡ ಸಚಿವರು ಹೇಳಬೇಕು.

೧೧-೩೦ ಎ. ಎಂ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಅಧ್ಯಕ್ಷರೆ, ಈ ಕಾರ್ಯವನ್ನು ನಾವು ತಡಮಾಡುವುದಿಲ್ಲ. ೧೯೯೦-೯೧ನೇ ಸಾಲಿನಲ್ಲಿ ಈ ಕೆಲಸವನ್ನು ಕೈಗೆ ತೆಗೆದುಕೊಳ್ಳುತ್ತೇವೆ ಮತ್ತು ಅದನ್ನು ಪೂರ್ಣಗೊಳಿಸಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ.ಹೆಚ್. ಹನುಮೇಗೌಡ.—ಸ್ವಾಮಿ, ಈ ಕೆಲಸಕ್ಕಾಗಿ ಬಂದಿರತಕ್ಕ ಹಣವನ್ನು ಅಲ್ಲಿ ಬೇರೆ ಬೇರೆ ಕೆಲಸಕ್ಕೆ ಖರ್ಚು ಮಾಡುತ್ತಿದ್ದಾರೆ. ಇಂಜಿನಿಯರ್‌ಗಳು ದುಡ್ಡು ಹೊಡೆಯುವುದಕ್ಕೆ ಈ ರೀತಿ ಮಾಡುತ್ತಿದ್ದಾರೆ. ಈ ರೋಜ್‌ಗಾರ್ ಯೋಜನೆಯಲ್ಲಿ ಹತ್ತು ಪರ್ಸೆಂಟ್ ಬಡವರಿಗೂ ಕೂಡ ಇದರ ಪ್ರಯೋಜನ ಸಿಕ್ಕುವುದಿಲ್ಲ. ಬೇಕಾಗಿಯೇ ಈ ಕೆಲಸವನ್ನು ಅವರು ತಡಮಾಡುತ್ತಿದ್ದಾರೆ: ಇಂಥ